ಬೆಂಗಳೂರಿನ ನಗರದ ಆಟೋರಿಕ್ಷಾಗಳಲ್ಲಿ ಸೀಮೆಎಣ್ಣೆ ಬಳಸುತ್ತಿರುವ ಆರೋಪದ ಬಗ್ಗೆ

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ತಾವು ಓದಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಆಟೋರಿಕ್ಷಾಗಳಿಂದ ಪ್ರಮಾಣವು ಒಂದು ಮುಖ್ಯ ಸಾಗಾಣಿಕೆಯ ವ್ಯವಸ್ಥೆ. ಆಟೋರಿಕ್ಷಾಗಳಿಗೆ ಹಾಕುವ ಪೆಟ್ರೋಲ್ ನಲ್ಲಿ, ಅನೇಕ ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್‌ನಲ್ಲಿ ಸೀಮೆ ಎಣ್ಣೆ ಕಲಬೆರಿಕೆ ಮಾಡುವುದು ಸಾಧಾರಣ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯವರು ಪೆಟ್ರೋಲ್ ಬಂಕ್‌ಗಳನ್ನು ಪರೀಕ್ಷಿಸದೆ ಆಟೋ ರಿಕ್ಷಾಗಳನ್ನು ಪರೀಕ್ಷಿಸಿ ಪೆಟ್ರೋಟಿನಲ್ಲಿ ಕಿರೋಸಿನ್ ಬಳಸಿದ್ದಾರೆಂದು ಆ ಬಡ ವಾಹನ ಚಾಲಕರ ಮೇಲೆ ವಜ್ರಾಯುಧ ಉಪಯೋಗಿಸಿ ಅವರ ವಾಹನಗಳನ್ನು ನಿಲ್ಲಿಸಿ ವಾಹನ ಚಾಲಕರನ್ನು ಬಂಧಿಸಿ ತುಂಬಾ ತೊಂದರೆ ಕೊಟ್ಟು ಅವರ ಜೀವನ ಮಾರ್ಗಕ್ಕೆ ಅಡ್ಡಿ ಬಂದಿರುವುದು ತುಂಬಾ ಅಮಾನುಷ ಅನ್ಯಾಯ. ಇದು ನಿಲ್ಲಬೇಕು. ಮೂಲಭೂತವಾಗಿ ಯಾರಿಗೆ ದಂಡ ವಿಧಿಸಬೇಕೋ ಅವರನ್ನು ಪ್ರತಿಷ್ಠಿತ ಹೆಸರುಗಳೆಂದು ಬಿಟ್ಟು ಬಡವರ ಮೇಲೆ ಗದಪ್ರಹಾರ ಮಾಡುವುದು ಅನ್ಯಾಯ. ಈ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಹೇಳಿಕೆಯನ್ನು ಕೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಪೋಲೀಸ್ ಇಲಾಖೆಯ ಆಹಾರದ ಘಟಕದ ಸಿಬ್ಬಂದಿಯವರಿಗೆ ಬೆಂಗಳೂರು ನಗರದಲ್ಲಿ ಒಳಪಟ್ಟ ಆಟೋರಿಕ್ಷಾಗಳು ಸೀಮೆಎಣ್ಣೆ ಮಿಶ್ರಿತ ಪೆಟ್ರೋಲ್ ಅಥವಾ ಬರೀ ಸೀಮೆ ಎಣ್ಣೆ ಬಳಸುತ್ತಿವೆ ಎಂದು ಖಚಿತವಾದ ಮಾಹಿತಿ ಬಂದ ಮೇರೆಗೆ ದಿನಾಂಕ ೧೬-೩-೧೯೮೮ ರಿಂದ ಸುಮಾರು ಮೂರು ಸಾವಿರ ಆಟೋಗಳನ್ನು ಚೆಕ್ ಮಾಡಲಾಗಿ ೧೯೨ ಆಟೋಗಳು ಅಂತಹ ಪೆಟ್ರೋಲ್‌ನ್ನು ಬಳಸುತ್ತಿದ್ದುದನ್ನು ಪತ್ತೆ ಹಚ್ಚಿದರು. ಈ ಬಳಕೆ ಬಗ್ಗೆ ಕರ್ನಾಟಕ ಸೀಮೆಎಣ್ಣೆ (ಬಳಕೆ ಬಗ್ಗೆ ಪ್ರತಿಬಂಧಕ ಆಜ್ಞೆ) ಮತ್ತು ಅಗತ್ಯ ವಸ್ತುಗಳ ಕಾನೂನು ಕಲಂ ೩ ಮತ್ತು ೭ರ, ಅನ್ವಯ ಈ ರೀತಿ ಮಾಡುವುದನ್ನು ನಿಷೇಧಿಸಿದೆ. ಕಾರಣ, ೧೯೨ ಆಟೋರಿಕ್ಷಾಗಳನ್ನು ಜಪ್ತು ಮಾಡಲಾಗಿದೆ ಮತ್ತು ೧೮೭ ಚಾಲಕರನ್ನು ದಸ್ತಗಿರಿ ಮಾಡಲಾಗಿದೆ. ಇವರಲ್ಲಿ ೧೧೧ ಮಂದಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದ್ದು, ೭೬ ಮಂದಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ಚೆಕ್‌ಗಳನ್ನು ಮುಂದುವರಿಸಲಾಗಿದೆ.

ಆಹಾರ ಘಟಕದವರು ನಗರದಲ್ಲಿ ಹಲವಾರು ಪೆಟ್ರೋಲ್ ಬಂಕ್‌ಗಳನ್ನು ಚೆಕ್ ಮಾಡಿದಾಗ ಅಲ್ಲಿ ಸೀಮೆ ಎಣ್ಣೆ ಮಿಶ್ರಿತ ಪೆಟ್ರೋಲನ್ನು ಮಾರುತ್ತಿದ್ದುದು ಕಂಡುಬಂದಿಲ್ಲ. ಆದ್ದರಿಂದ ಆಟೋ ಚಾಲಕರೇ ಕಾನೂನನ್ನು ಉಲ್ಲಂಘಿಸಿ ತಮ್ಮ ವಾಹನಗಳಿಗೆ ಸೀಮೆ ಎಣ್ಣೆ ಮಿಶ್ರಿತ ಪೆಟ್ರೋಲ್‌ನ್ನು ಬಳಸುತ್ತಿದ್ದುದು ದೃಢಪಟ್ಟಿದೆ. ನಗರದ ಕೆಲವೆಡೆ ಇಂತಹ ಪೆಟ್ರೋಲನ್ನು ಮಾರುವ ಸ್ಥಳಗಳು ಇದ್ದು, ಅವನ್ನು ಪತ್ತೆ ಹಚ್ಚುವುದರಲ್ಲಿ ಆಹಾರ ಘಟಕ ತೊಡಗಿದೆ. ಆಮೇಲೆ, ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಸಾಯಂಕಾಲ ಇದೇ ಮಾನ್ಯ ಸದಸ್ಯರು ಆಟೋರಿಕ್ಷಾ ಡ್ರೈವರುಗಳನ್ನು ನನ್ನ ಹತ್ತಿರ ಕರೆದುಕೊಂಡು ಇನ್ನು ಮುಂದೆ ಬೇಕಾದರೆ ಸ್ವಲ್ಪ ಬಿಗಿ ಮಾಡಿ. ಈಗ ಬಂಧಿಸಿರುವವರನ್ನು ಬಿಟ್ಟು ಬಿಡಿ ಎಂದೂ ಹೇಳಿದರು. ನಾವು ಸೆಷನ್ ಕೋರ್ಟ್‌ನಲ್ಲಿ ಇದರ ಬಗ್ಗೆ ಕೇಸ್ ಹಾಕಿ ಬಂಧಿತರನ್ನು ಕೋರ್ಟ್ ಮುಂದೆ ಪ್ರೊಡೂಸ್ ಮಾಡಿದ್ದೇವೆ ಅಲ್ಲಿ ೧೧೧ ಜನ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದಾರೆ. ಇನ್ನೂ ೭೬ ಮಂದಿ ಬಂಧನದಲ್ಲಿ ಇದ್ದಾರೆ. ಅವರೂ ಜಾಮೀನ ಮೇಲೆ ಬಿಡುಗಡೆ ಮಾಡಿಸಿಕೊಳ್ಳಬಹುದು. ನಾವು ಮುಖ್ಯ ಯೋಚನೆ ಮಾಡುವುದು ಏನೆಂದರೆ, ಒಂದನೆಯದು, ಸೀಮೆ ಎಣ್ಣೆಯನ್ನು ನಾವು ನಗರದ ನಾಗರೀಕರಿಗೆ ಸರಬರಾಜು ಮಾಡಿರುವುದು. ಅದನ್ನು ಪೆಟ್ರೋಲ್ ಆಗಿ ಉಪಯೋಗಿಸುವುದಕ್ಕೆ ಬರುವುದಿಲ್ಲ. ಪೆಟ್ರೋಲ್ ಬದಲಿಗೆ ಸೀಮೆ ಎಣ್ಣೆ ಉಪಯೋಗಿಸಿದರೆ ವಾಹನ ಕೆಟ್ಟು ಹೋಗುತ್ತದೆ ಜೊತೆಗೆ ಏರ್ ಪಲ್ಯೂಷನ್ ಜಾಸ್ತಿಯಾಗುತ್ತದೆ. ಏರ್‌ನಲ್ಲಿ ಕಾರ್ಬನ್ ಮಾನಾಕ್ಸೈಡ್ ಜಾಸ್ತಿಯಾಗುವುದರಿಂದ ಜನಗಳಿಗೆ ಬುದ್ಧಿಮಾಂದ್ಯ ಉಂಟಾಗುತ್ತದೆ. ಆದ್ದರಿಂದ, ಸೀಮೇ ಎಣ್ಣೆಯನ್ನು ಪೆಟ್ರೋಲ್ ಬದಲಿಗೆ ಬಳಸಬಾರದು. ಇದನ್ನು ಮಾನ್ಯ ಸದಸ್ಯರಿಗೂ ನಿನ್ನೆಯೇ ತಿಳಿಸಿದ್ದೆ, ಆದರೂ ಇವತ್ತು ಈ ವಿಷಯವನ್ನು ಎತ್ತಿದ್ದಾರೆ. ಇನ್ನೂ ಬಂಧನದಲ್ಲೇ ಇರುವ ೭೬ ಮಂದಿ ಡ್ರೈವರುಗಳನ್ನು ಜಾಮೀನಿನ ಮೇಲೆ ಬಿಡಿಸಿಕೊಳ್ಳಲಿ. ಸೀಮೆ ಎಣ್ಣೆಯನ್ನು ಪೆಟ್ರೋಲ್ ಬದಲಿಗೆ ಉಪಯೋಗಿಸುವುದು ಕಾನೂನಿಗೆ ವಿರುದ್ಧವಾಗುತ್ತದೆ ಜೊತೆಗೆ ಜನತೆಗೆ ಆರೋಗ್ಯ ಕೆಡಿಸುವ

ದಕ್ಕೆ ಕಾರಣವಾಗುತ್ತದೆ. ಬೆಂಗಳೂರು ನಗರದಲ್ಲಿ ವಾಸ ಮಾಡುವ ಜನರ ಬಗ್ಗೆ ನಾವು ಯೋಚನೆ ಮಾಡಬೇಕು.

ಅಧ್ಯಕ್ಷರು.—ಈಗ ಆರ್. ಎನ್. ನಾಯಕ್‌ರವರು, ಗೈರು ಹಾಜರಿ.

೩. ರಾಜ್ಯದಲ್ಲಿ ಐ.ಪಿ.ಎಸ್. ಮತ್ತು ಐ.ಎ.ಎಸ್. ಅಧಿಕಾರಿಗಳ ನಡುವೆ ಉಂಟಾಗಿರುವ ಘರ್ಷಣೆ

ಶ್ರೀ ಡಿ.ಎ. ಚೆನ್ನಪ್ಪ.—ರಾಜ್ಯದ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ನಡುವಣ ಜಗಳ ಈಗ ಬಯಲಾಗಿದ್ದು ಇತ್ತೀಚೆಗೆ ಸಭೆ ಸೇರಿದ್ದ ಐ.ಪಿ.ಎಸ್. ಅಧಿಕಾರಿಗಳು, ತಮ್ಮ ಬಡ್ತಿ ವಿಚಾರದಲ್ಲಿ ಆ ವರ್ಗಕ್ಕೆ ಸಲ್ಲ ಬೇಕಾದಷ್ಟು ಪ್ರಾಮುಖ್ಯತೆ ಸಲ್ಲದಿರುವುದನ್ನು ಪ್ರಸ್ತಾಪಿಸಿ ಆ ಬಗ್ಗೆ ಸದ್ಯದಲ್ಲೇ ಮುಖ್ಯಮಂತ್ರಿಗಳನ್ನು ಭೇಟಿ ಮಾಡಬೇಕೆಂದು ನಿರ್ಧರಿಸಿರುವುದಾಗಿ ತಿಳಿದು ಬಂದಿದೆ. ಈ ಹಿಂದೆ ಐ.ಪಿ.ಎಸ್. ಅಧಿಕಾರಿಯೊಬ್ಬರನ್ನು ವಿಧಾನಸೌಧದಲ್ಲಿ ವಿಶೇಷಕಾರ್ಯದರ್ಶಿಯನ್ನಾಗಿ ನೇಮಿಸಿದ್ದರು. ಈಗ ಆ ಸ್ಥಾನವನ್ನು ಅಡಿಶನಲ್ ಕಾರ್ಯದರ್ಶಿಯ ದರ್ಜೆಗೆ ಇಳಿಸಲಾಗಿದೆ. ಹೀಗಿದ್ದೂ ಐ.ಪಿ.ಎಸ್. ಅಧಿಕಾರಿ ಐ.ಎ.ಎಸ್. ಅಧಿಕಾರಿಯ ಕೈಕೆಳಗೆ ಕೆಲಸ ಮಾಡಬೇಕಾಗಿದೆ. ಅಲ್ಲದೆ ೧೯೬೨ರಿಂದ ಐ.ಪಿ.ಎಸ್. ಅಧಿಕಾರಿಗಳಿಗೆ ಬಡ್ತಿಸಿಕ್ಕಿಲ್ಲವೆಂದು ತಿಳಿದು ಬಂದಿದೆ. ಆದ್ದರಿಂದ ಈ ಬಗ್ಗೆ ಸರಕಾರದವರು ಹೇಳಿಕೆ ನೀಡಬೇಕೆಂದು ಒತ್ತಾಯಿಸುತ್ತೇನೆ.

SRI M. RAGHUPATHY (Minister for Fisheries and Ports) (On behalf of the Chief Minister).—I would like to make the following statement :

> "There is no conflict between IAS and IPS officers in the State. The post of Special Secretary in Home Department was not in existence earlier. This post was that of an Addl. Secretary for a long time. When Sri N. S. Vasudevan, was working as Additional Secretary and he was promoted, the post was upgraded in January 1984 so as to continue him there. The next incumbent was in the post for a very short time. After his transfer, it was found expedient to operate the post at Addititional Secretary level only. Secondly this post is not earmarked for IPS officers. Any officer of equivalent rank can be posted here. Not only an Additional Secretary but even the Speciel Secretary has to report to the Secretary in a department as per the Transaction of of Business Rule Two officers of 1962 batch are on Central Deputation and one officers working in the State has already been promoted to the grade of I.G. Another 2 officers are to be promoted as and when vacancies arise."

೪. ಬ್ರಹ್ಮಾವರದ ವ್ಯಾಪ್ತಿಗೆ ಒಳಪಟ್ಟ ಕಲ್ಯಾಣಪುರ ಪೆರ್ಡೂರು ಮತ್ತಿತರ ರಸ್ತೆಗಳಿಗೆ ತಾರು ಹಾಕಿಸುವ ಬಗ್ಗೆ

ಶ್ರೀ ಬಸವರಾಜ್ (ಬ್ರಹ್ಮಾವರ).—ನನ್ನ ಮತದಾರ ಕ್ಷೇತ್ರವಾದ ಬ್ರಹ್ಮಾವರದ ವ್ಯಾಪ್ತಿಗೆ ಒಳಪಟ್ಟ ಹೆಚ್ಚಿನ ರಸ್ತೆಗಳು ನಾದುರಸ್ತಿಯಲ್ಲಿವೆ. ಅದರಲ್ಲಿಯೂ ಜಿಲ್ಲಾ ರಸ್ತೆಗಳಾದ (೧) ಕಲ್ಯಾಣಪುರ–ಪೆರ್ಡೂರು ದೊಡ್ಡಂಗಡಿ ರಸ್ತೆ, (೨) ಕೊಕ್ಕರ್ಣೆ–ಸಂತೆಕಟ್ಟೆ ರಸ್ತೆಗಳು ಈವರೆಗೆ ಸಂಪೂರ್ಣ ತಾರಂ